‘ಹುಲಿ ಅಮ್ಮ ನೋಡು– ನಿನ್ನ ಮಗಳನ್ನು ಕರೆದುಕೋ! ನಾವು ಬೆಂಗಳೂರಿಗೆ ಹೊರಟಿದ್ದೇವೆ. ಮರಿಯನ್ನು ಇಲ್ಲೇ ಬಿಟ್ಟರೆ ಯಾರಾದರೂ ಬಂದು ಹುರಿದು ಮುಕ್ಕಿಬಿಟ್ಟಾರು ಎಂದು ಹೇಳಿದಳು ಶ್ರೀನಿಧಿ. ನೆನಪಿಗೆಂದು ಮರಿ ಕಾಲಿಗೆ ತನ್ನ ಕಾಲಿನ ಒಂದು ಬೆಳ್ಳಿಗೆಜ್ಜೆ ಬಿಚ್ಚಿ ಕಟ್ಟಿದಳು. ಹುಲಿಮರಿ ಗೆಜ್ಜೆ ಸಪ್ಪಳ ಮಾಡುತ್ತಾ ಓಡುತ್ತಿತ್ತು.

ಬೆಂಗಳೂರಿಗೆ ಬಂದ ಮೇಲೆ ಶಾಲೆಯ ಪಾಠಗಳತ್ತ ಗಮನವಿಟ್ಟಳು ಶ್ರೀನಿಧಿ. ನಿತ್ಯ ಸಂಗೀತ, ಟ್ಯೂಷನ್, ಸ್ವಿಮ್ಮಿಂಗ್ ಎಂದು ಹುಲಿಮರಿಯನ್ನು ಮರೆತೇ ಹೋದಳು. ಒಂದಿನ ಶಾಲೆಯಲ್ಲಿ ಪ್ರಾರ್ಥನೆ ನಡೆದಿತ್ತು. ಒಮ್ಮೆಲೇ ಹುಲಿ ಹುಲಿ ಎಂಬ ಕಿರುಚಾಟ ಕೇಳಿಸಿತು. ಹುಲಿಯೊಂದು ಗರ್ಜಿಸುತ್ತಾ ಒಳಗೆ ಬರುತ್ತಿತ್ತು. ಮಕ್ಕಳೆಲ್ಲ ಸತ್ತೆವೋ ಬದುಕಿದೆವೋ ಎನ್ನುತ್ತ ಓಡಿದರು. ಶಿಕ್ಷಕರಿಗೆ ಏನೂ ತೋಚುತ್ತಿಲ್ಲ. ಶ್ರೀನಿಧಿಯೂ ಓಡಿ ಒಂದು ಗಿಡದ ಹಿಂದೆ ಅವಿತುಕೊಂಡಳು. ಅವಳ ಹತ್ತಿರವೇ ಹುಲಿ ಬಂತು. ಹುಲಿ ಇವಳನ್ನು ದುರುಗುಟ್ಟಿ ನೋಡುತ್ತಿದೆ. ದೂರದಲ್ಲಿ ನಿಂತವರು ಅಯ್ಯೋ ಶ್ರೀನಿಧಿ ತಪ್ಪಿಸಿಕೋ! ಹುಲಿ ನಿನ್ನ ಕೊಂದುಬಿಡುತ್ತೆ. ಎಂದು ಜೋರಾಗಿ ಕಿರುಚಿದರು.

ಕಾಲು ಬಡಿಯತೊಡಗಿತು ಹುಲಿ. ಹುಲಿಯ ಕಾಲಲ್ಲಿ ತಾನು ಕಟ್ಟಿದ ಗೆಜ್ಜೆ. ಗೆಜ್ಜೆ ನೋಡಿದ ಶ್ರೀನಿಧಿಗೆ ಸಂಭ್ರಮ. ತನ್ನ ಹುಲಿಮರಿ. ಆಗಲೇ ಹಳ್ಳಿಕಡೆ ಹೋಗದೇ ಮೂರು ವರ್ಷ. ಹುಲಿ ಎಷ್ಟು ದೊಡ್ಡದಾಗಿದೆ. ನನ್ನ ಮುದ್ದುಮರಿ ಬಾ ಎಂದು ಮೈ ಸವರಿದಳು.

ಹುಲಿ ಬೆನ್ನು ಚಾಚಿತು. ಅದನ್ನೇರಿ ಸವಾರಿ ಮಾಡಿದಳು. ಕಂಡವರು ಗಡ ಗಡನೇ ನಡುಗಿದರು. ಅಷ್ಟರಲ್ಲಿ ಅಲ್ಲಿಗೆ ಬಂದಿದ್ದ ಅರಣ್ಯ ಇಲಾಖೆಯವರು ಅರವಳಿಕೆ ಚುಚ್ಚುಮದ್ದು ನೀಡಿ ಹುಲಿಯನ್ನು ಬೋನಿಗೆ ಹಾಕಲು ಸಿದ್ಧರಾಗಿದ್ದರು. ಆಗ ಶ್ರೀನಿಧಿ ನಾನು ಸಾಕಿದ್ದ ಹುಲಿಮರಿಯಿದು. ನಮ್ಮ ಅಜ್ಜಿ ಊರಲ್ಲಿ ಅದಕ್ಕೆ ಹಾಲು ಕುಡಿಸಿದ್ದೆ. ಜೋಪಾನ ಮಾಡಿದ್ದೆ. ಏನೂ ಮಾಡಬೇಡಿ! ತಾನಾಗೇ ಕಾಡಿನೆಡೆ ಹೋಗುತ್ತದೆ ಎನ್ನುತ್ತಾ, ‘ಅಮ್ಮಣ್ಣಿ! ನೀನು ಜಾಣೆ ಇಲ್ಲಿ ಮಕ್ಕಳು ದೊಡ್ಡವರು ನಿನ್ನ ನೋಡಿ ಹೆದರುತ್ತಾರೆ’ ಎಂದು ತಾನೂ ಹುಲಿಯನ್ನು ಕಾಡಿಗೆ ಕಳಿಸಲು ಹೊರಟಳು.

ಕಾಡು ಬರುತ್ತಿದ್ದಂತೆ, ಹುಲಿ ನಿಂತು ಹೊರಳಿ ನೋಡಿತು. ಶ್ರೀನಿಧಿ ಹುಲಿಗೆ– ‘ನೀನೆಂದೂ ನನ್ನ ಹುಡುಕಿ ಬರಬೇಡ. ಮನುಷ್ಯರನ್ನೇ ಬಿಡದವರು ಕಾಡ ಹುಲಿಯನ್ನು ಬಿಟ್ಟಾರೆಯೇ’ ಎಂದಳು. ಗೋಣು ಆಡಿಸಿತು ಹುಲಿ. ತಲೆ ತಗ್ಗಿಸಿ ಹೋಗುತ್ತಿದ್ದ ಹುಲಿ ಕಂಡ ಶ್ರೀನಿಧಿ ಕಣ್ಣೀರಾಗಿ ವಿದಾಯ ಹೇಳಿದಳು. ■



# ಕನ್ನಡ

■ **ಹೊರೆಯಾಲ ದೊರೆಸ್ವಾಮಿ**

ಕಲೆ: ಸಂತೋಷ್ ಸಸಿಹಿತ್ಲು



ಕನ್ನಡ ಎಲ್ಲಿದೆಯೋ! ನಮ್ಮ
ಕನ್ನಡ ಎಲ್ಲಿದೆಯೋ?

ಅಪ್ಪ ಅಮ್ಮನ ಮಾತೇ ಇಲ್ಲ
ಡ್ಯಾಡಿ ಮಮ್ಮಿ ಮನೆಯಲ್ಲೆಲ್ಲ
ಶಾಲೆಗೆ ಹೋದರೆ ಸ್ಕೂಲಿದೆಯಲ್ಲ
ಗುರುಗಳ ಬದಲಿಗೆ ಟೀಚರ್‌ಗಳೆಲ್ಲ!

ಅಆಇಈ ಕಲಿಸುವುದಿಲ್ಲ
ಎಬಿಸಿಡಿ ಕಲಿಸುವರೆಲ್ಲ
ಮಕ್ಕಳ ಮೆದುಳಿಗೆ ಒತ್ತಿ ಒತ್ತಿ
ಇಂಗ್ಲಿಷ್ ಭಾಷೆಯ ಮೆತ್ತುವರಲ್ಲ!

ರೈಲಲ್ಲಿ ಬಸ್ಸಲ್ಲಿ ಎಲ್ಲೆಂದರಲ್ಲಿ
ಬ್ಯಾಂಕಿಗೆ ಬೇಕ್ರಿಗು ಹೋದಡೆಯೆಲ್ಲ
ಕಾರ್ಖಾನೆ ಒಳಹೊಕ್ಕು ನಡೆದರೆ! ಖುಲ್ಲ
ಇಂಗ್ಲಿಷ್ ಭಾಷೆಲಿ ಗೊಣಗುವರಲ್ಲ!

ಹೆಮ್ಮೆಯ ಭಾಷೆ ನಮ್ಮಯ ಭಾಷೆ
ಪಂಪ ಬಸವರು ಆಡಿದ ಭಾಷೆ
ಇಂದೇಕೆ ಸೊರಗಿದೆ ನಾಡಿನಲ್ಲೆಲ್ಲ
ಎಂಬುದ ಧ್ವನಿ ಎತ್ತಿ ಕೇಳಬೇಕೆಲ್ಲ!

ಸಂಕೋಚ ಬಿಟ್ಟು ಸಡಗರ ಪಟ್ಟು
ಎದೆಯಲಿ ಕನ್ನಡದ ಗಿಡವನು ನೆಟ್ಟು
ಬೆಳೆಸೋಣ ಬನ್ನಿರೋ ಕನ್ನಡದ ವನವ
ತಿಳಿಸೋಣ ವಿಶ್ವಕ್ಕೆ ಕನ್ನಡ ಮನವ!

## ಕುಂಚ ಪ್ರಪಂಚ





**ಸಂಜನಾ ಎಂ. ಶಿವಳ್ಳಿ**
4ನೇ ತರಗತಿ, ಕಾರ್ಮೆಲ್ ಇಂಗ್ಲಿಷ್ ಸ್ಕೂಲ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in